# ನಿಮ್ಮ ಯೋಗಸಾಧನೆಗೊಂದು ಕಿರುಪರೀಕ್ಷೆ

ಅನೇಕ ವರ್ಷಗಳ ಕಾಲ ಸಂಸಾರಿಯಾಗಿ ಶ್ರೀಸಾಮಾನ್ಯನಂತೆ ಜೀವನ ನಡೆಸುತ್ತಿದ್ದ ಸಂತ ರಾಮದಾಸರು ಓಂ ಶ್ರೀರಾಮ ಜಯ ರಾಮ ಜಯ ಜಯರಾಮ ಎಂಬ ಮಹಾಮಂತ್ರವನ್ನು ಪಠಿಸುತ್ತಾ, ಶ್ರೀ ರಾಮದೇವರ ಸಾಕ್ಷಾತ್ಕಾರ ಪಡೆದು ಭಾರತದ ಮಹಾ ಸಂತ ಶ್ರೇಷ್ಠರಲ್ಲಿ ಒಬ್ಬರಾಗಿ, ಕೇರಳರಾಜ್ಯದ ಕಾಸರಗೋಡು ಸಮೀಪ ಕಾಞಂಗಾಡಿನಲ್ಲಿ ತಮ್ಮ ವಿನೂತನವಾದ ಆನಂದಾಶ್ರಮ ವನ್ನು ಸ್ಥಾಪಿಸಿ, ಜಗತ್ತಿನಾದ್ಯಂತ ಶಿಷ್ಯಕೋಟಿಯನ್ನು ಹೊಂದಿದ್ದಾರೆ.

ರಾಮದಾಸರನ್ನು ಅವರ ಅಸಂಖ್ಯಾತ ಶಿಷ್ಯರು ಭೇಟಿಯಾದಾಗ ಶಿಷ್ಯರನ್ನು ಕುರಿತು 'ಹೇಗೆ ನಡೆಯುತ್ತಾ ಇದೆ ನಿಮ್ಮ ಜಪ, ತಪ, ಧ್ಯಾನ' ಎಂದು ವಿಚಾರಿಸುತ್ತಿದ್ದರು. ಸ್ವಲ್ಪವೂ ಸಾಧನೆಯ ಮಾರ್ಗ ದಲ್ಲಿ ಪ್ರಗತಿಯನ್ನು ಕಾಣದ ಶಿಷ್ಯರನ್ನು ಉದ್ದೇಶಿಸಿ 'ಧ್ಯಾನ ಅಥವಾ ರಾಮನಾಮಜಪ ಆಯುಷ್ಯಪೂರ್ತಿ ಮಾಡುತ್ತಾ ಇರುವುದಲ್ಲ. ಪ್ರಗತಿಯನ್ನು ಕಾಣದಿದ್ದರೆ ಸಾಧನೆಯಲ್ಲಿ ಲೋಪವಿದೆ ಎಂದು ತಿಳಿದುಕೊಳ್ಳಬೇಕು' ಎಂದು ಅವರು ಹೇಳುತ್ತಿದ್ದರು. 'ನಿಮ್ಮ ಸಾಧನೆ ಯಾವ ಹಂತದಲ್ಲಿದೆ ಎಂದು ತಿಳಿದುಕೊಳ್ಳುವುದಕ್ಕೋಸ್ಕರ ಒಂದು ಕಿರು ಪರೀಕ್ಷೆ ಮಾಡುತ್ತೇನೆ. ನಿಮ್ಮೆಲ್ಲರಿಗೂ ಒಂದು ಪ್ರಶ್ನಪತ್ರಿಕೆ ಕೊಡುತ್ತೇನೆ. ಅದರಲ್ಲಿ ಒಟ್ಟು ೮ ಪ್ರಶ್ನೆಗಳಿವೆ. ನೀವು ಆ ಎಲ್ಲಾ ಪ್ರಶ್ನೆಗಳನ್ನು ನಿಧಾನವಾಗಿ ಓದಿ ಆನಂತರ ಆ ಪ್ರಶ್ನೆಗಳಿಗೆ ಹೌದು ಅಥವ ಇಲ್ಲ ಎಂಬ ಪದಗಳಿಂದ ಉತ್ತರಿಸಬೇಕು. ಆ ಎಲ್ಲ ೮ ಪ್ರಶ್ನೆಗಳಿಗೆ ನಿಮ್ಮ ಉತ್ತರ "ಹೌದು" ಎಂದಾಗಿದ್ದರೆ ದೇವರ ಸಾಕ್ಷಾತ್ಕಾರ ನಿಮಗೆ ಸಮೀಪಿಸುತ್ತಿದೆ ಎಂದು ತಿಳಿದುಕೊಳ್ಳಿ. ಒಂದು ಪಕ್ಷ ನಿಮ್ಮ ಉತ್ತರ "ಇಲ್ಲ" ಎಂದಾಗಿದ್ದರೆ ಭಗವಂತ ನಿಮ್ಮಿಂದ ಇನ್ನೂ ಬಹಳ ದೂರದಲ್ಲಿದ್ದಾನೆ ಎಂದು ತಿಳಿಯಿರಿ' ಎಂದು ಆಶೀರ್ವದಿಸುತ್ತಾ ಅವರು ಈ ಕೆಳಗಿನ ಪ್ರಶ್ನಪತ್ರಿಕೆಯನ್ನು ಶಿಷ್ಯರಿಗೆ ವಿತರಿಸಿದರು. ಅದು ಈ ರೀತಿ ಇತ್ತು:

೧) ನಿಮ್ಮ ಇಷ್ಟದೇವರ ಮಂತ್ರವನ್ನು (ಓಂ ನಮಃ ಶಿವಾಯ, ಓಂ ನಮೋ ನಾರಾಯಣಾಯ, ಓಂ ಶ್ರೀರಾಮ ಜಯರಾಮ ಜಯ ಜಯ ರಾಮ, ಓಂ ಹ್ರಾಂ ಓ ಗುರು ದತ್ತಾಯ ನಮಃ, ಓಂ ಶ್ರೀ ಗುರು ಬಸವಲಿಂಗಾಯ ನಮಃ, ಓಂ ಶ್ರೀ ಸಮರ್ಥ ಸದ್ಗುರು ಸಾಯಿನಾಥಾಯ ನಮಃ ಇತ್ಯಾದಿ ಇತ್ಯಾದಿ) ಶ್ರದ್ಧಾಭಕ್ತಿಯಿಂದ ಪಠಿಸುತ್ತಿದ್ದೀರಾ?

೨) ನಿಮ್ಮ ಜೀವನದ ಪ್ರತಿಯೊಂದು ಘಟನೆಯೂ ಅದು ಒಳ್ಳೆಯದಾಗಲಿ ಅಥವ ಕೆಟ್ಟದಾಗಲಿ ಭಗವಂತನಿಂದಲೇ ಬಂದು ದೆಂದು ಒಪ್ಪಿಕೊಂಡಿದ್ದೀರಾ?

೩) ನಿಮ್ಮ ಜೀವನದಲ್ಲಿ ನಿಮಗೆ ದೇವರಿಂದ ಒದಗಿ ಬಂದಿರುವ ಸ್ಥಾನಮಾನಗಳು ಹಾಗು ಸೌಲಭ್ಯಗಳಿಂದ ತೃಪ್ತನಾಗಿದ್ದೇನೆ ಎಂದು ಒಪ್ಪಿಕೊಂಡಿದ್ದೀರಾ?

೪) ಸಮಾಜದಲ್ಲಿರುವ ಇತರರಿಗೆ ಹೆಚ್ಚಿನ ಸಂತೋಷವನ್ನು ಕೊಡಲು ನಿಮ್ಮಲ್ಲಿರುವ ಅಲ್ಪ ಸ್ವಲ್ಪ ಸೌಲಭ್ಯಗಳನ್ನು ತ್ಯಾಗ ಮಾಡಿದ್ದೀರಾ?

೫) ಜಗತ್ತಿನ ಎಲ್ಲ ಜನರ ಮುಂದೆ ನಿರಹಂಕಾರಿಯಾಗಿ ವಿನಮ್ರರಾಗಿ ವರ್ತಿಸುತ್ತಿದ್ದೀರಾ?

೬) ದ್ವೇಷ ಅಸೂಯೆ ತಿರಸ್ಕಾರಗಳಿಂದ ಮುಕ್ತರಾಗಿದ್ದೀರಾ?

೭) ನೀವು ನಿಮಗೆ ದೇವರೊಬ್ಬನೇ ಬೇಕು ಮತ್ತಾವುದೂ ಬೇಡ ಎಂಬ ಸಂಕಲ್ಪ ಮಾಡಿದ್ದೀರಾ?

೮) ಈ ಪ್ರಪಂಚದ ಎಲ್ಲ ಜನರನ್ನು ನೀವು ನಿಮ್ಮ ಸ್ವಂತ ದವರನ್ನು ಪ್ರೀತಿಸುವಂತೆ ಪ್ರೀತಿಸುವ ಹೃದಯವೈಶಾಲ್ಯವನ್ನು ಹೊಂದಿದ್ದೀರಾ?

ಸಾಧಕರು ಮೇಲಿನ ಪ್ರಶ್ನೆಗಳನ್ನು ಓದಿಕೊಂಡು ಪ್ರಾಮಾಣಿಕ ವಾಗಿ ಉತ್ತರಿಸಿ ತಮ್ಮ ಯೋಗ ಸಾಧನೆ ಯಾವ ಹಂತದಲ್ಲಿದೆ ಎಂದು ತಿಳಿದುಕೊಳ್ಳಬಹುದಾಗಿದೆ.

**ಸಂಗ್ರಹ** : ಸಿದ್ಧರಾಮಯ್ಯ (ನಿವೃತ್ತ ಡಿಡಿಪಿಐ)

ನೀನು ಆಧ್ಯಾತ್ಮಿಕತೆಯ ಉನ್ನತ ಹಂತಗಳನ್ನು ಸಮೀಪಿಸಿದಂತೆಲ್ಲ ನಿನ್ನನ್ನು ನೀನು ಅಳಿಸಿಹಾಕಬೇಕು. ನಮ್ರತೆಯೇ ಕ್ರಿಸ್ತಾನುಸರಣೆ, ದಂಭ ದರ್ಪಾದಿಗಳು ಸೈತಾನನ ಗುರಿಗಳು. ಕ್ರೈಸ್ತನನ್ನು ಅನುಸರಿಸು. ಪ್ರತಿದಿನದ ಕಾರ್ಯಗಳನ್ನು ಪರೀಕ್ಷಿಸು, ಅವುಗಳನ್ನು ಹಿಂದಿನ ದಿನದ ಕಾರ್ಯಗಳಿಗೆ ಹೋಲಿಸಿ ನೋಡು ಮತ್ತು ಉತ್ತಮಗೊಳಿಸಲು ಸರ್ವಪ್ರಯತ್ನ ಮಾಡು.

—ಸಂತ ಬ್ಯಾಸಿಲ್ (St.Basil)

ದಿವ್ಯಮಾರ್ಗದಲ್ಲಿ ನಾನು ಮುಂದುವರಿಯುತ್ತಿದ್ದೇನೆ ಮತ್ತು ನಾನು ಬೇರೆಯವರಿಗಿಂತ ಮುಂದಿದ್ದೇನೆ ಎಂಬ ಭಾವನೆ ಅಹಂಕಾರವನ್ನು ಹೆಚ್ಚಿಸುತ್ತದೆ. ಆದ್ದರಿಂದ ಭಗವನ್ನಾಮವನ್ನು ಉಚ್ಚರಿಸುವಾಗ ಅತ್ಯಂತ ನಮ್ರತೆಯ ಭಾವ ಇರಬೇಕು—ಭಗವಂತನೇ ನಾನು ನಾಮೋಚ್ಚಾರಣೆಗೈಯುವಂತೆ ಮಾಡುತ್ತಿರುವನು, ಇದು ನನ್ನ ಪ್ರಯತ್ನದಿಂದಲ್ಲ ಎಂದು ಭಾವಿಸಬೇಕು. ಇದೇ ಭಗವನ್ನಾಮವನ್ನು ಉಚ್ಚರಿಸುವ ರಹಸ್ಯ.

—ಸ್ವಾಮಿ ರಾಮದಾಸ